ಆದುದರಿಂದ ಅವರು ಏನೋ ವ್ಯಾಪಾರ ದೃಷ್ಟಿಯಿಂದ ಆ ರೀತಿ ಮಾಡಿಕೊಂಡಿದ್ದಾರೆ, ಆದನ್ನು ಸಹ ತಾವು ಇಲ್ಲಿಯೇ ಇರಬೇಕೆಂದು ಹೇಳುವುದಾದರೆ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ಈ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್‌ನವರಿಗೆ ಪೇಪರ್ ತಯಾರಿಸಲು ಬಿದಿರು ಟನ್ ಒಂದಕ್ಕೆ ೧೫ ರೂಪಾಯಿಗಳ ಹಾಗೆ ಕೊಡುತ್ತಿದ್ದೀರಿ ಅದೇ ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಸ್ ಲಿಮಿಟೆಡ್ ರವರಿಗೆ ಟನ್ ಒಂದಕ್ಕೆ ೫೦ ರೂ.ಗಳ ಹಾಗೆ ಕೊಡುತ್ತಿದ್ದೀರಿ. ಇದರಿಂದ ಸರ್ಕಾರಕ್ಕೆ ಲಾಸ್ ಆದ ಹಾಗೆ ಆಗುತ್ತಿಲ್ಲವೇ ? ಇದಕ್ಕೆ ಹಿಂದೆ ಏನಾದರೂ ಕರಾರು ಆಗಿದ್ದರೆ ಅದನ್ನು ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ಪರಿಶೀಲನೆ ಮಾಡಿ ಅಲ್ಲಿ ಏನು ಉತ್ತಮ ಪಡಿಸಬೇಕೋ ಅದನ್ನು ಉತ್ತಮ ಪಡಿಸುವುದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಟಿ. ಮಾಯಣ್ಣ.—ಕಾನೂನಿನ ಪ್ರಕಾರ ಎಂದರೆ ಅವರಿಗೆ ಎಷ್ಟು ವರ್ಷಗಳವರೆಗೆ ಅಂತ ತಾವು ಆ ರೀತಿ ಕೊಡುವುದು, ಇದರಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ, ನಮ್ಮ ಸರ್ಕಾರಕ್ಕೆ ಲಾಸ್ ಆಗುವುದಿಲ್ಲವೇ ?

ಶ್ರೀ ಆರ್. ಗುಂಡೂರಾವ್.—ಇದರಿಂದ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತದೆ ಇಲ್ಲವೆಂದಲ್ಲ. ಆಂದರೆ ಹಿಂದಿನ ಸರ್ಕಾರಗಳು ಇದನ್ನು ಯೋಚನೆ ಮಾಡದೆಯೇ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಆದುದರಿಂದ ಈಗ ನಾವು ಕಾನೂನು ಪ್ರಕಾರ ಪರಿಶೀಲನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅಷ್ಟು ಮಾಡೋಣ.

ಶ್ರೀ ಬಿ. ಎಚ್. ಪಟೀಲ್.—ಸ್ವಾಮಿ, ಈ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನ ಒಂದು ಅಗ್ರಿಮೆಂಟ್ ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಆಗಿತ್ತು, ಅನಂತರ ಬಂದ ಸರ್ಕಾರಗಳು ಆ ಅಗ್ರಿಮೆಂಟನ್ನು ರಿವೈಜ್ ಮಾಡಿಲ್ಲ. ಅದೇ ರೇಟನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ಮೊನ್ನೆ ಒಬ್ಬ ಖಾಸಗೀ ಮಾಲೀಕರವರಿಗೆ ಟನ್ ಒಂದಕ್ಕೆ ೧೫ ರೂ.ಗಳ ಹಾಗೆ ಕೊಟ್ಟು ಸರ್ಕಾರಿ ಸಂಸ್ಥೆಗೆ ೫೦ ರೂ.ಗಳ ಹಾಗೆ ಕೊಡುವುದು ಸರಿಯೇ ? ಆದುದರಿಂದ ಈಗ ಹೊಸದಾಗಿ ಬಂದಿರುವ ಸರ್ಕಾರದವರು ಆದರೂ ಏತಕ್ಕೆ ರಿವೈಜ್ ಮಾಡಬಾರದು ? ಇಲ್ಲದಿದ್ದರೆ ಒಂದೇ ರೇಟ್‌ನ್ನು ಎಲ್ಲರಿಗೂ ಫಿಕ್ಸ್ ಮಾಡಿ ಆದರಿಂದ ತೊಂದರೆ ಇರುವುದಿಲ್ಲವಲ್ಲಾ ?

ಶ್ರೀ ಆರ್. ಗುಂಡೂರಾವ್.—ಅದು ಯಾವ ಯಾವ ಸಂದರ್ಭದಲ್ಲಿ ಹೇಗೆ ಹೇಗೆ ಆಯಿತು ಎಂಬ ನಿಖರವಾಗಿ ಡಿಟೇಲ್ಸ್ ನನಗೆ ಗೊತ್ತಿಲ್ಲ. ಅದು ೩೦ ವರ್ಷಕ್ಕೆ ಅಗ್ರಿಮೆಂಟ್ ಆಗಿದೆ. ಮಾನ್ಯ ಶ್ರೀ ವೀರೇಂದ್ರ ಪಾಟೀಲರವರು ಮುಖ್ಯಮಂತ್ರಿಗಳಾಗಿದ್ದಕ್ಕಿಂತ ಹಿಂದೆ ಸಹ ಇದು ಅಗ್ರಿಮೆಂಟ್ ಆಗಿದೆ. ಆದುದರಿಂದ ಇದನ್ನೆಲ್ಲಾ ಪುನರ್ ಪರಿಶೀಲನೆ ಮಾಡಿ ಎಲ್ಲರಿಗೂ ಒಂದೇ ರೀತಿಯಲ್ಲಿ ಅನುಕೂಲ ಮಾಡಿಕೊಡುವುದಕ್ಕೆ ಕಾನೂನು ಪ್ರಕಾರ ಸಾಧ್ಯವಿದೆಯೇ ನೋಡುತ್ತೇನೆ.

ಶ್ರೀ ಡಿ. ಟಿ. ಮಾಯಣ್ಣ.—ಇದರ ವಾಯಿದೆ ಎಷ್ಟು ದಿವಸಕ್ಕೆ ಮುಗಿಯುತ್ತದೆ ? ಆದರಲ್ಲಿ ರಿವೈಜ್ ಮಾಡುವುದಕ್ಕೆ ಏನಾದರೂ ಕಂಡೀಷನ್ ಹಾಕಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—ಅದನ್ನು ನಾನು ನೋಡಬೇಕು, ಯಾವ ತರಹ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ ಅಂತ ಸಡನ್ ಆಗಿ ಕೇಳಿದರೆ ಹೇಗೆ ಹೇಳಲಿ ?

Donation of Land to Marathi Primary School in Belgaum Taluk.

82. SRI B. B. SAYANAK (Belgaum).—Will the Chief Minister be pleased to state :—

(a) whether it is not a fact that Sri Anarn Dattatray Waghavadakar of Shahapur, Belgaum had donated S.N. 57. 61/2 and 93 of Santibustawad Village in Belgaum Taluk. to a Marathi Primary School of that Village through Village Panchayat Committee ;

(b) if so, what is the area of the land ;

(c) whether the Government had constructed Janatha House in S.N. 57 ;

(d) if so, how many Janatha Houses have been constructed ;

(e) whether it is a fact that Government is going to construct ome more Janatha Houses in S.N. 57 ?

SRI R. GUNDU RAO (Chief Minister).—

(a) Yes.

(b) 29 Acres 29 Guntas.

(c) Yes.

(d) 12.

(e) No.

SRI B. B. SAYANAK (Belgaum).—May I know whether the Janata House are constructed on the private lands or on the Government lands ?

SRI G. B. SHANKAR RAO (Minister for Education).—As per information given, Janatha Houses have been constructed in S. No. 57 of Santibustawad village in Belgaum Taluk.

SRI B. B. SAYANAK.—My question is, generally are the Janata Houses constructed on private lands or Government lands ?

SRI G. B. SHANKAR RAO.—The Hon'ble Member must be knowing that if the land is available in the vicinity of gautana, generally such houses are constructed. Here in this particular case, S.Nos. 57, 61/2 and 93 of Santibustawad village, were donated to the Panchayat and they stand in the name of the Panchayat Chairman. He has allowed the construction of Janata houses. In this particular survey No. 12 houses have been constructed. The Panchayat Chairman has come forward to give land for construction of Janata houses and therefore the houses have been constructed.

SRI B. B. SAYANAK.—You have stated the name of the donor as "Sri Anarn Dattatray Waghavadakar". It is not correct. It may please be corrected as "Ananth Dattatray Waghavadakar". He has donated this land for the Marathi Primary School with the consent of the Panchayat. When that is the case, how did this Panchayat Chairman has hand over this land for construction of Janata Houses ?

SRI G.B. SHANKAR RAO.—The Hon'ble member is a senior member and is also an advocate. He must be knowing that the Panchayat is

a statutory body. If there are any conditions stipulated and if they have been violated, it is for the doner to seek appropriate remedy in a court of law. The Government cannot proceed against the Panchayat Chairman ; if the land has been given by a resolution of the Panchayat, we cannot interfere.

SRI B. B SAYANAK.—Is it not the duty of the Government also to see whether this land is Government land ? When the Hon'ble Minister has categorically stated that the land has been donated, why did the Government has allow construction of Janata house on the land donated specifically for a Marathi Primary School ?

SRI G. B. SHANKAR RAO.—We have not allowed ; it is the Panchayat which has allowed the construction of Janata House. But I assure the hon'ble Member that we have advised the Panchayat not to allow any more Janata House to come up on these lands.

ಶ್ರೀ ಎಂ. ನುಳ್ಳೂರು ಆನಂದರಾವ್.—ಸ್ವಾಮಿ, ಪ್ರಶ್ನೆ ಸರಳವಾಗಿದೆ, ಅವರು ಜಮೀನನ್ನು ಕೊಟ್ಟಿರುವುದು ಶಾಲೆಯನ್ನು ಕಟ್ಟಿಸುವುದಕ್ಕೋಸ್ಕರವಾಗಿ, ಆದರೆ ಅಲ್ಲಿ ಪಂಚಾಯಿತಿಯವರು ಜನತಾ ಮನೆಗಳನ್ನು ಕಟ್ಟಿಸುವುದಕ್ಕೆ ಉಪಯೋಗಿಸಿ ಕೊಂಡಿರುವುದು ತಪ್ಪಲ್ಲವೇ ? ಆ ರೀತಿ ದುರುಪಯೋಗ ವಾಗದ ಹಾಗೆ ನೋಡಿಕೊಳ್ಳಬೇಕಾದ್ದು ಸರ್ಕಾರದವರ ಜವಾಬ್ದಾರಿ ಕೂಡ ಅಲ್ಲವೇ ? ಯಾವ ಉದ್ದೇಶ ಕೋಸ್ಕರವಾಗಿ ಕೊಟ್ಟಿದ್ದಾರೋ ಆ ಉದ್ದೇಶಕೋಸ್ಕರವೇ ಉಪಯೋಗಿಸಿಕೊಳ್ಳಿ ಅಂತ ಹೇಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲವೇ ?

ಶ್ರೀ ಜಿ. ಬಿ. ಶಂಕರ್ ರಾವ್.—ಅದು ಮಾನ್ಯ ಸದಸ್ಯರಿಗೆ ಆಕ್ಷೇಪವಾಗಿರಬೇಕು. ಅಲ್ಲಿ ಜನತಾ ಮನೆಗಳನ್ನು ಕಟ್ಟಿದಮೇಲೆ ಆ ವಿಷಯ ಗೊತ್ತಾಯಿತು ನಂತರ ಅದನ್ನು ಆ ರೀತಿ ಮಾಡಬೇಡಿ. ಯಾವ ಉದ್ದೇಶಕ್ಕಾಗಿ ಕೊಡಲಾಗಿರೆಯೋ ಅದಕ್ಕೆ ಉಪಯೋಗಮಾಡಿ ಎಂದು ಹೇಳಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಆ ಜಮೀನು ಖಾಸಗೀ ಮಾಲೀಕರಿಗೆ ಸಂಬಂಧಪಟ್ಟಿದ್ದು. ಸಾಮಾನ್ಯ ವಾಗಿ, ಜಮೀನು ಖಾಸಗಿಯವರ ಸ್ವಾಧೀನದಲ್ಲಿದ್ದರೆ ಅದನ್ನು ಸರ್ಕಾರ ಸ್ವಾಧೀನಪಡಿಸಿಕೊಂಡ ನಂತರ ಜನತಾ ಮನೆಗಳನ್ನು ಕಟ್ಟುವುದಕ್ಕೆ ಕೊಡಬೇಕು. ಖಾಸಗಿಯವರು ಯಾವಾಗ ಶಾಲೆ ಕಟ್ಟುವುದಕ್ಕಾಗಿ ಆ ಜಮೀನು ಡೊನೇಟ್ ಮಾಡಿರುತ್ತಾರೋ ಆಲ್ಲಿಂದಲೇ ಅವರಿಗೆ ಅಲ್ಲಿ ಶಾಲೆ ಕಟ್ಟುವುದಕ್ಕೆ ಅಧಿಕಾರ ಇದೆ. ಸರ್ಕಾರ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದೆ ಪಂಚಾಯಿತಿಯವರು ಆ ಜಮೀನಿನಲ್ಲಿ ಮನೆ ಗಳನ್ನು ಕಟ್ಟುವುದಕ್ಕೆ ಹೋದರೂ ಅದು ಅಕ್ರಮ ಪ್ರವೇಶವಾಗುತ್ತದೆ. ಅದ್ದರಿಂದ, ಸರ್ಕಾರದವರು ಸದರಿ ವಿಚಾರದ ಬಗ್ಗೆ ಪಂಚಾಯಿತಿಯ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಿ. ಶಂಕರ್‌ರಾವ್.—ಅದು ಖಾಸಗಿಯವರ ಜಮೀನಾಗಿ ಉಳಿದಿಲ್ಲ, ಪಂಚಾಯಿತಿಯ ಹೆಸರಿನಲ್ಲಿದೆ. The land stands in the name of the Panchayat Chairman and to that effect entries have been made. The Government has no right over that land. Panchayat is a Statutory Body, and therefore we cannot take any action against the Panchayat because the houses have already been constructed. It is a big plot of 25 acres and 29 guntas. They have constructed one Marati school on a land measuring one acre and one gunta. I think it is not a big Marati population area to have some more Marathi schools. The Panchayat has stated that the remaining land will be utilised for the benefit of the Panchayat.

SRI B. V. KAKKILAYA.—Either the Panchayat or the Government have no powers at all to encroach upon any private land. Have they acquired this land ? If not, it is a clear case of encroachment ;

SRI G B. SHANKAR RAO.-This is a voluntary act of the Panchayat they have handed over possession of the land. Acquisition is only a formality. If the land has been given voluntarily, it is not an encroachment.

SRI B. V. KAKKILAYA.—It is not a gift ; it is a donation for the purpose of building a school. How can the Panchayat use it for any other purpose when the land is not in their possession ? The land belongs to somebody else.

SRI G.B. SHANKAR RAO.—It is in the possession of the Panchayat. I do not know whether it is a donation or a gift. If the hon'ble member wants further information, I shall collect the information and pass it on.

SRI B. B. SAYANAK.—This land is specifically donated to the Marati school. I want to know why the Chairman of the Panchayat has not informed the authorities, *viz.*, the Deputy Commissioner or the B.D.O. that this land is donated to the Marati Primary school only ? There is enough vacant Government land nearby. Why the Panchayat Chairman has not constrcuted Janata houses on the Government land, and why has he constructed Janata houses on this particular land ?

SRI G. B. SHANKAR RAO.—The Government was not aware of it. Now that the Government has come to know that the land has been donated for a specific purpose and that it has not been utilised for that specific purpose, we will inform the Panchayat about it.

Amount of Cess collected on Pulses by the APMC Bellary

104 SRI M. RAMAPPA (Kurugodu).—Will the Minister for Finance and Co-operation be pleased to state: –

(a) the amount of cess collected on pluses by the Agricultural Produce Market Committee, Bellary from 23rd February 1978 to 31st March 1979,

(b) if the Committee has not collected the cess, the reasons ;

(c) what action the Government proposes to take against the authorities for non-collection of cess and for delay ;

(d) whether any representation has been received by Government from the public in this behalf, if so, the action taken ?